

ಕೆಂಡಂದಂತೆ' ಎಂಬ ಕಾಲದ ಅಮ್ಮನಿಗೆ ಛತ್ರಿಗಿಂತ ರೈನ್ ಕೋಟ್ ತನ್ನ ಮಗಳನ್ನು ಕಾಪಾಡಿಕೊಳ್ಳುವ ಅಸ್ತ್ರವಾಗುತ್ತಿತ್ತು! ಈ ಎಲ್ಲ ಕಾರಣಕ್ಕಾಗಿ ನಾನು ನೆನೆದರೂ ಪರವಾಗಿಲ್ಲ ಎಂದು ಹಟ ಮಾಡಿ ಛತ್ರಿಯೇ ಬೇಕೆಂದು ಧರಣಿ ಕುಳಿತೆ. ಅಂತೂ ಅಮ್ಮ ನನ್ನ ಬೇಡಿಕೆಗೆ ಧುಮುಗುಡುತ್ತಲೇ ಒಪ್ಪಿದಳು.

ಅದೊಂದು ಸುಂದರವಾದ ಸನ್ನಿವೇಶ ಗಮನಿಸಿ ಅಥವಾ ನೀವೇ ಕಣ್ಣ ಮುಂದೆ ತಂದುಕೊಳ್ಳಿ. ಆಗ ತಾನೇ ಪಿಯುಸಿ ಮುಗಿಸಿ ಪದವಿ ಕಾಲೇಜು ಸೇರಿರುವ ಹರೆಯದ ಹುಡುಗಿ, ಚಂದಗೆ ಅಲಂಕರಿಸಿಕೊಂಡು ಒಂದು ಕೈಯಲ್ಲಿ ಪುಸ್ತಕವನ್ನು ಎದೆಗಾನಿಸಿ, ಇನ್ನೊಂದು ಕೈಯಲ್ಲಿ ಛತ್ರಿ, ಜೊತೆಗೆ ಮಳೆ ನೀರು ಚಪ್ಪಲಿಗೂ ತಗುಲಬಾರದು ಎಂಬಂತೆ ಎತ್ತಿ ಹಿಡಿದ ಲಂಗ, ದಾರಿಯಲ್ಲಿ ಕಾದು ಜೊತೆಯಾಗುತ್ತಿದ್ದ ಒಂದಷ್ಟು ಪಡ್ಡೆಹುಡುಗರ ಕಣ್ಣೋಟಕ್ಕೆ ನಮ್ಮ ಅಲಂಕಾರ ಅವರ ಮನಸ್ಸಿನ ತೊಳಲಾಟಕ್ಕೆ ನಮ್ಮದೊಂದು ಸ್ಟೈಲ್. ನಮ್ಮ ನಗುವನ್ನ ಅರ್ಥವೋ, ಅಪಾರ್ಥವೋ ಮಾಡಿಕೊಂಡು ತಮಗಾಗಿಯೇ ನಕ್ಕರೆಂದು ಭ್ರಮಿಸಿ ನಮ್ಮ ಕಾಲೇಜಿನ ತನಕ ಬಾಡಿಗಾರ್ಡ್‌ಗಳಂತೆ ಬಿಟ್ಟು ಹೋಗುವಾಗ ಮನಸ್ಸಿನಲ್ಲಿಯೇ ನಕ್ಕು ಕಾಲೇಜಿನ ಒಳ ಹೊಕ್ಕುತ್ತಿದ್ದೆವು. ಆ ರೈನ್ ಕೋಟ್ ಧರಿಸಿದ್ದರೆ ಇಂತಹ ಸುಂದರ ಮಳೆಯ ದಿನಗಳನ್ನು ಅದು ಹಾಳುಗೆಡವಿ ಬಿಡುತ್ತಿತ್ತು. ಹಾಗಾಗಿಯೇ ನಾನು ಛತ್ರಿಯನ್ನೇ ನಂಬಿ ಛತ್ರಿ ಹುಡುಗಿಯಾಗಿದ್ದೆ!

ಯೌವ್ವನದಲ್ಲಿ ನಮಗೊಂದು ಭ್ರಮೆ ಇರುತ್ತದೆ. ನಾವು ತ್ರಿಲೋಕ ಸುಂದರಿಯರೆಂದು, ನಮಗಾಗಿಯೇ ಈ ಪ್ರೇಮಲೋಕದ ಗಂಡುಗಳು ಕಾಯುತ್ತಿದ್ದಾರೆ ಎಂದು ಕಲ್ಪಿಸಿ, ಅದನ್ನು ಮನಸ್ಸಿನಲ್ಲಿಯೇ ಎಂಜಾಯ್ ಮಾಡುವ ಆ ಕಲ್ಪನೆ ಆ ಕಾಲಕ್ಕೆ, ಆ ವಯಸ್ಸಿಗೆ ಅತ್ಯಂತ ಖುಷಿ ಕೊಡುವ ವಿಷಯ. ನನ್ನ ಅನೇಕ ಗೆಳತಿಯರು ಈ ಮಳೆಗಾಲದಲ್ಲಿಯೇ ನಮ್ಮ ಗೆಳೆಯರೊಂದಿಗೆ ಕಾಲೇಜು ಬಂಕ್ ಹಾಕಿ ಸಿನಿಮಾಗಳಿಗೆ ಓಡುತ್ತಿದ್ದರು. ನನಗೆ ಯಾವ ಬಾಯ್ ಫ್ರೆಂಡ್ ಇಲ್ಲದ್ದರಿಂದ ನಮ್ಮ ಕನಸುಗಳನ್ನು